ಈ ಬೀಭತ್ಸ ಶರೀರವನ್ನು ಬೆಂಕಿ ಕಾರುವ ಡ್ರಾಗನ್ ಒಂದು ತೆಳ್ಳಗೆ ಸುತ್ತುವರೆದಿತ್ತು.

'ದಯೆ, ಪ್ರೀತಿ, ವಿನಯ ಈ ಎಕ್ಸ್‌ಪ್ರೆಷನ್ಸ್ ಇತ್ತು ಮಾರ್‍ರೇ ನಾವು ಆವತ್ತು ತಂದ ಪ್ರತಿಮೆಯಲ್ಲಿ. ನೋಡಿದ ಕೂಡಲೇ ಕೈ ಮುಗಿಯುವ ಅಂತ ಆಗ್ತಾ ಇತ್ತು... ಆದ್ರೆ ಈಗ ನೋಡಿ, ಈ ಜೀವಿಗಳು ಹೇಗೆ ಆ ಇಡೀ ಶಿಲೆಯನ್ನೇ ರಿಸ್ಟೋರ್ ಮಾಡಿದ್ದಾರೆ...'

'ಅಂದ್ರೆ... ಯಾರ್‍ರೀ ಹಿಸ್ಟಾರಿಕಲ್ ಮಾನ್ಯುಮೆಂಟ್ಸ್‌ನ ರಿಸ್ಟೋರ್ ಮಾಡ್ತಾ ಇರೋದು...? ಹೇಗ್ರಿ ಮಾಡಕ್ಕೆ ಆಗುತ್ತೆ ರೀ ಅದು... ನಿಮ್ಗೆ ಹುಚ್ಚು'.

'ಹ್ಞಾ ಅದೇ! ನಿಜ ಹೇಳಿದ್ರೆ ಎಲ್ಲ ಹುಚ್ಚ ಅಂತ ಲೇಬಲ್ ಅಂಟಿಸಿ ಬಿಡ್ತಾರೆ. ಅದಕ್ಕೇ ಈ ವಿಷಯಾನ ಯಾರೂ ಸಹ ಯಾರಿಗೂ ಹೇಳಲಿಕ್ಕೆ ಆಗುವುದಿಲ್ಲ... ನಿಮ್ಗೆ ಗೊತ್ತಾಯಿತು ನೋಡಿ... ಯಾಕಂದ್ರೆ ನಿಮ್ಗೂ ಹುಚ್ಚು...' ಎಂದು ವಿಕೃತವಾಗಿ ಹಲ್ಲು ಬಿಟ್ಟ. ನಾನು ಮತ್ತೆ ಆ ಘೋರ ಪ್ರತಿಮೆಯಲ್ಲಿ ಕಂಡ ಮುಖವನ್ನು ದಿಟ್ಟಿಸಿದೆ. ಹಯವದನ ರಾಯ ನನ್ನ ಮೌನವನ್ನು ಲೆಕ್ಕಿಸದೆ ಮಾತನಾಡುತ್ತಲೇ ಇದ್ದ. ಅವನಿಗೂ ಎಲ್ಲವನ್ನೂ ಸುಮ್ಮನೇ ಕೇಳಿಸಿಕೊಳ್ಳುವ ಒಂದು ಅಸ್ತಿತ್ವದ ಅವಶ್ಯಕತೆ ಇತ್ತೇನೋ. ಆತ ಹೇಳಿದ್ದಿಷ್ಟು. ಈ ಎಕ್ಸ್‌ಕವೇಷನ್ ಮಿಶನ್ ಶುರು ಆದ ಮೇಲೆ ಕಳೆದ ಒಂದು ವರುಷದಿಂದ ಈ ಕಚೇರಿಗೆ ಹೀಗೆ ಪುರಾತನ ಶಿಲೆಗಳು, ಪ್ರತಿಮೆಗಳು, ಮೂರ್ತಿ ಮುಂತಾದವುಗಳು ಬಂದು ಬೀಳುತ್ತಲೇ ಇವೆಯಂತೆ. ಆದರೆ ಈತ ಗಮನಿಸುತ್ತಾ ಹೋದಂತೆ ಕ್ರಮೇಣ ಕೆಲ ಮಹಾತ್ಮರ ಪ್ರತಿಮೆಗಳು, ಕೆಲ ಕಾರಣಿಕ ಪೌರಾಣಿಕ ಜೀವಿಗಳ ವಿಗ್ರಹಗಳ ದೈವಿಕ ರೂಪಕಗಳನ್ನು ಕ್ರೂರ ಹಗೆಯ ಭಾವನೆಗಳಲ್ಲಿ ಪರಿವರ್ತಿಸುವ ಅನ್ಯ ಜಂತುಗಳ ಕೇಡಿನ ಸಮೂಹವೊಂದು ಕಣ್ಣಿಗೆ ಕಾಣದ ಕ್ರಿಮಿಗಳಂತೆ ಕಣ್ಕಟ್ಟು ಮಾಡಿ ತಮ್ಮ ತಮ್ಮ ಕಾರ್ಯ ಸಾಧಿಸುತ್ತಾ ಇದ್ದಾರಂತೆ. ಇವುಗಳ ಈ ಶಿಲ್ಪಿ ಕುಸುರಿ ಕೆಲಸ ಮುಗಿದು ಹೋಗುತ್ತಿದ್ದಂತೆಯೇ ನಿಗೂಢವಾದ ಟ್ರಕ್ಕುಗಳು ರಾತ್ರೋರಾತ್ರಿ ಬಂದು ಈ ಜೀರ್ಣೋದ್ಧಾರವಾದ ಶಿಲೆಗಳನ್ನು ಹೊತ್ತು ಒಯ್ಯುತ್ತಾರಂತೆ. ಹೀಗೆ ರೂಪಾಂತರಗೊಂಡ ರೌರವ ಕೇಡಿನ ಸೊಬಗುಳ್ಳ ಮೂರ್ತಿಗಳನ್ನು ಯಾವ ಗುಡಿಯಲ್ಲಿ ಪ್ರತಿಷ್ಠಾಪಿಸುತ್ತಾರೆ ಯಾರಿಗೂ ಗೊತ್ತಿಲ್ಲ...'

'ಯಾಕೆ ಇಷ್ಟೆಲ್ಲಾ... ಆರ್ಕಿಯಾಲಜಿ ಡಿಪಾರ್ಮೆಂಟಿಗೂ ವಿಗ್ರಹ ಚೋರರಿಗೂ ಏನಾದರೂ ಕನೆಕ್ಷನ್ಸ್...' ಅಂದೆ ನಾನು ಚೂರು ಅನುಮಾನವಿಲ್ಲದ ದನಿಯಲ್ಲಿ.

'ವಿಗ್ರಹ ಕಳ್ಳರಲ್ಲ ಅವ್ರು... ಅವ್ರು ವರ್ಕರ್ಸ್... ಮತ್ತೆ ದೇವರಿಗೆ ಕೋಪ ಬಂದಿದೆ ಅಂತ ತೋರಿಸಿ ಭಯ ಹುಟ್ಟಿಸಬೇಕಲ್ಲ ಎಲ್ಲರಲ್ಲಿ... ದೇವರ ಭಯವೇ ಜ್ಞಾನದ ಆರಂಭ ಅಲ್ಲ... ಆಗ ಮನುಷ್ಯರು ಬಾಯಿ ಮುಚ್ಚಿ ಕೂರ್ತಾರೆ. ಮೂತ್ರಕ್ಕೆ ಹೋಗಲಿಕ್ಕೂ ಪರ್ಮಿಶನ್ ಕೇಳೋ ಲೆವಲ್ಲಿಗೆ ಒಬೀಡಿಯೆಂಟ್ ಆಗಿರ್ತಾರೆ ಎಲ್ಲ' ಎಂದು ಎಕ್ಸೈಟ್ ಆಗಿ ನಕ್ಕ. ಇಲ್ಲಿಂದ ಮತ್ತೆ ಪುನರ್ಜನ್ಮ ಪಡೆದ ಈ ಪ್ರಾಚೀನ ಪಳೆಯುಳಿಕೆಗಳು ಮತ್ತೆ ದೇಶದ ಯಾವುದೋ ಮೂಲೆಯ ಗುಡಿಯಲ್ಲೋ, ರೈಲ್ವೇ ವಿಮಾನ ನಿಲ್ದಾಣದಲ್ಲೋ, ಅಧ್ಯಕ್ಷರ ಉದ್ಯಾನವನದಲ್ಲೆಲ್ಲೋ ಅಥವಾ ಹೊಸ ಪ್ರವಾಸಿ ತಾಣವಾಗಿ ಮಹಾನಗರಗಳ ಮೂಲೆಯಲ್ಲೆಲ್ಲೋ ತಲೆ ಎತ್ತುತ್ತಾ ಇವೆಯಂತೆ. ಬೇರೆ ಎಲ್ಲ ಆರ್ಕಿಯಾಲಜಿ ವಿಭಾಗಗಳಲ್ಲಿ ಏನ್ ಆಗ್ತಾ ಇದೆಯೋ ಏನೋ, ಆದರೆ ಇಲ್ಲಿನ ಈ ವಿಲಕ್ಷಣ ಬೆಳವಣಿಗೆಯನ್ನು ಕಂಡುಹಿಡಿದು ಅನಾಮಿಕ ಮೂಲೆಗಳಿಂದ ಸಾವಿನ ಜಟಕಾಬಂಡಿಗಳಂತೆ ಇದಕ್ಕಿದ್ದಂತೆ ಹಾಜರಾಗುತ್ತಿದ್ದ ಟ್ರಕ್ಕುಗಳ ಬೆನ್ನು ಹತ್ತಿ ಹೋದ ಬಲರಾಮ ನಾಯ್ಡು ಮತ್ತೆ ಮರಳಲೇ ಇಲ್ಲವಂತೆ. ಕಳವಳಗೊಂಡು ಪೊಲೀಸ್ ಸ್ಟೇಷನ್, ಲಾಯರ್ ಆಫೀಸ್, ಕೋರ್ಟ್ ರೂಮುಗಳನ್ನು ಅಲೆದು ಪಂಚಾಯಿತಿ ಮಾಡುತ್ತಿದ್ದ ನಾಯ್ಡು ಹೆಂಡತಿಯ ಅಕೌಂಟಿಗೆ ಡೈರೆಕ್ಟಾಗಿ ಭಾರಿಮೊತ್ತದ ಡೆಪಾಸಿಟ್ ಬಂದು ಬಿತ್ತಂತೆ. ವಿಚಾರಿಸಲು ಹೋದಾಗ ಆಕೆಯ ಎಮ್.ಪಿ.ಎನ್. ಆನ್‌ಲೈನ್ ಪೇಮೆಂಟ್ ಕ್ಯಾಶ್ ಬ್ಯಾಕ್ ಸರ್ವಿಸಲ್ಲಿ ಬಂಪರ್ ಬಹುಮಾನ ಆಕೆ ಗೆದ್ದಿದ್ದಾಳೆಂದರಂತೆ ಬ್ಯಾಂಕ್ ಸಿಬ್ಬಂದಿ... ಆ ನಂತರ ಅನಾಮತ್ತಾಗಿ ಏನೋ ಅಲೌಕಿಕ ಜ್ಞಾನ ಸಂಪಾದಿಸಿದಂತೆ ಮಿಸ್ಸೆಸ್ ನಾಯ್ಡು ತನ್ನ ಅನ್ವೇಷಣೆಗೆ ಪೂರ್ಣ ವಿರಾಮ ಹಾಕಿದಳಂತೆ. ಈ ಎಮ್.ಪಿ.ಎನ್ ಕೂಡ ಮನೋಜ್ ಪರ್ವತನೇನಿಯ ಬಳಗದವರ ಖಾಸಗಿ ಬ್ಯಾಂಕೊಂದರ ಆ್ಯಪ್ ಎನ್ನುವುದು ನನಗೆ ಆಗ ನೆನಪಿಗೆ ಬಂತು.

ಆಂಧ್ರ ಬಾಬು ಪರ್ವತನೇನಿ ಪ್ರೈವೇಟ್ ಝೂ ಥೀಮ್ ಪಾರ್ಕ್ ಬೇರೆ ಬರುತ್ತಲ್ಲ ಇಲ್ಲಿ... ಅಂತ